# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹುತ್ತಳ್ಳಿ, ತೀರ್ಥಹಳ್ಳಿ ತಾ.




## ಪೀಠಿಕೆ:-

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹುತ್ತಳ್ಳಿ ನಲಿ-ಕಲಿ ತರಗತಿಯಲ್ಲಿ 15 ಮಕ್ಕಳು ಕಲಿಯುತ್ತಿದ್ದಾರೆ. ಸ್ವ-ಕಲಿಕೆ ಸಂತಸರಾಯಕ-ಕಲಿಕೆ-ಸ್ವ ವೇಗದ ಕಲಿಕೆಯೊಂದಿಗೆ ಸಾಗುತ್ತಿದೆ. ಶಿಸು ಕೇಂದ್ರಿತ ಶಿಕ್ಷಣಕ್ಕೆ ಪೂರಕವಾದ ವಾತಾವರಣ ನಿರ್ಮಿಸಿ, ಮಗುವು ಸಮಾಜಮುಖಿಯಾಗಿ ಬೆಳೆಯಲು ಸರ್ವತೋಮುಖವಾಗಿ ಮಾರ್ಗದರ್ಶಕರಾಗಿರುತ್ತೇವೆ. ಈ ಯೋಜನೆಯನ್ನು ಅಳವಡಿಸಿಕೊಂಡಿರುವ ಕುರಿತು ಸಂಕ್ಷಿಪ್ತ ವರದಿಯನ್ನು ಮಂಡಿಸಿದ್ದೇವೆ. ಮಕ್ಕಳಿಗಾಗಿ ಆಸ್ತಿ ಮಾಡಬೇಡಿ ಮಕ್ಕಳನ್ನೇ ಆಸ್ಥಿಯನ್ನಾಗಿ ಮಾಡಿ ಎಂಬ ಮಾತಿನ ಸದಾಶಯದೊಂದಿಗೆ ನಮ್ಮ ಶಾಲೆಯು ಕಾರ್ಯೋನ್ಮುಖವಾಗಿದೆ.

## ಶಾಲೆಯ ಇತಿಹಾಸ:-

ನಮ್ಮ ಶಾಲೆಯು 1961-62 ರಲ್ಲಿ ಪ್ರಾರಂಭವಾಗಿದ್ದು ಮೊದಲ ವರ್ಷದಲ್ಲೇ ಒಂದೇ ಕೊಠಡಿಯಲ್ಲಿ 1 ರಿಂದ 7 ನೇ ತರಗತಿವರೆಗೂ ವಿದ್ಯಾರ್ಜನೆಗೆ ಅನುವು ಮಾಡಿಕೊಟ್ಟಿತು. ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಗೆ ಏಕೈಕ ಶಾಲೆಯಾಗಿ ವಿದ್ಯಾರ್ಥಿಗಳಿಂದ ತುಂಬಿ ತುಳುಕುತ್ತಿತ್ತು. ನಂತರ ಸ್ಥಳಾವಕಾಶದ ಕೊರತೆಯಿಂದಾಗಿ1984-85 ರಲ್ಲಿ ಊರಿನ ಮಧ್ಯಭಾಗದಲ್ಲಿ ಶಾಲೆಯನ್ನು ನಿರ್ಮಿಸಲಾಯಿತು. ಅಂದಿನಿಂದ ಇಂದಿನವರೆವಿಗೂ ಅನೇಕ ವಿದ್ಯಾರ್ಥಿಗಳು ಉನ್ನತ ಸ್ಥಾನಗಳನ್ನು ಅಲಂಕರಿಸಲು ಅನುವು ಮಾಡಿಕೊಟ್ಟಿದೆ. ಅಂದು ಒಂದು ಕೊಠಡಿಯಿದ್ದ ಶಾಲೆ ಇಂದು 5 ಕೊಠಡಿಗಳಾಗಿ ಉತ್ತಮ ಶಾಲಾ ಕೈತೋಟ, ಶೌಚಾಲಯ, ನೀರಿನ ವ್ಯವಸ್ಥೆಯನ್ನು ಹೊಂದಿ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ.

## ಸಾಮೂಹಿಕ ಚಟುವಟಿಕೆ :-

ತರಗತಿಯ ಪ್ರಾರಂಭದಲ್ಲಿ ಕಲಿಕಾ ಹಂತಕ್ಕೆ ಅನುಗುಣವಾಗಿರುವ ಸಾಮೂಹಿಕ ಚಟುವಟಿಕೆಗಳನ್ನುಮಾಡಿಸಲಾಗುತ್ತದೆ. ಮಕ್ಕಳಿಗೆ ಹಾಡಿನೊಂದಿಗೆ ನೃತ್ಯ, ಆಟಗಳು, ಒಗಟುಗಳು ಮತ್ತು ಕೆಲವು ಚಟುವಟಿಕೆಗಳನ್ನು ಮಾಡಿಸುವುದರ ಮೂಲಕ ಮಕ್ಕಳನ್ನು ಕಲಿಕೆಗೆ ಅಣಿಗೊಳಿಸಲಾಗುವುದು.






**ಹವಾಮಾನ ನಕ್ಷೆ ಕ್ರೋಢೀಕೃತ ವಹಿ.**

ಹವಾಮಾನ ನಕ್ಷೆಯನ್ನು ಮಗುವು ಸುಲಭವಾಗಿ ಗುರುತಿಸುವಂತೆ ಅನುವುಗೊಳಿಸಲಾಗಿದೆ. ಪ್ರತಿದಿನದ ಹವಾಮಾನವನ್ನು ಮಕ್ಕಳೇ ನೋಡಿ ಗುರುತಿಸುವರು. ನಂತರ 2 ನೇ ತರಗತಿ ಮಕ್ಕಳು ಪುಸ್ತಕದಲ್ಲಿ ದಾಖಲಿಸಿಕೊಳ್ಳುವರು ಹಾಗೂ 3 ನೇ ತರಗತಿಯ ಮಕ್ಕಳು ದಾಖಲಿಸಿಕೊಳ್ಳುವರು.

**ಪ್ರಗತಿ ನೋಟ :-** ಪ್ರಗತಿನೋಟಗಳನ್ನು ಮಕ್ಕಳಿಗೆ ಕೈಗೆಟಕುವಂತೆ ಗೋಡೆಗೆ ತೂಗುಹಾಕಲಾಗಿದೆ. ಸ್ವತಃ ಮಕ್ಕಳೇ ಕಲಿಕಾ ದೃಢೀಕರಣದ ನಂತರ ಪ್ರಗತಿನೋಟದಲ್ಲಿ ✓ ಗುರುತು ಹಾಕುತ್ತಾರೆ. ಇದರಿಂದ ಮುಂದಿನ ಕಲಿಕಾ ಮೆಟ್ಟಿಲನ್ನು ಸುಲಭವಾಗಿ ಗುರುತಿಸುತ್ತಾರೆ.

**ಕಲಿಕಾ ತಟ್ಟೆಗಳು:-** ವಿಷಯವಾರು ಕಲಿಕಾ ತಟ್ಟೆಗಳನ್ನು ವ್ಯವಸ್ಥಿತವಾಗಿ ತೂಗುಹಾಕಲಾಗಿದೆ. ತಟ್ಟೆಗಳನ್ನು ನಿರ್ಧಿಷ್ಟ ಸ್ಥಳದಲ್ಲಿ ಹಾಕಲು ಸುಲಭವಾಗುವಂತೆ ಚಿತ್ರಗಳನ್ನು ಬರೆದು ಅಣಿಗೊಳಿಸಲಾಗಿದೆ. ಟ್ಯಾನ್ ಗ್ರಾಂ ಆಕೃತಿಗಳ ಜೋಡಣೆ ಮಾಡಿಸುವುದರ ಮೂಲಕ ವಿವಿಧ ಆಕೃತಿಗಳ ರಚಿಸುವುದು ಮುಖವಾಡಗಳನ್ನು ಪ್ರದರ್ಶಿಸಲಾಗಿದೆ.

**ಕಾರ್ಡ್ ಗಳ ಜೋಡಣೆ:-** ವಿಷಯವಾರು ಕಾರ್ಡ್ ಗಳನ್ನು ಬಟ್ಟೆಯ ಚೀಲದಲ್ಲಿ ಹಾಕಿ ಇಡಲಾಗಿದೆ. ವಿದ್ಯಾರ್ಥಿಗಳು ತಮ್ಮ ಕಾರ್ಡನ್ನು ಸರತಿಸಾಲಿನಲ್ಲಿ ತೆಗೆದುಕೊಳ್ಳಲು ಹೇಳುತ್ತೇವೆ.

**ದಿನಚರಿ ಮತ್ತು ಪುಸ್ತಕ ಖಜಾನೆ:-** ವಿಷಯವಾರು ದಿನಚರಿಗಳನ್ನು ನಿರ್ವಹಿಸಲಾಗಿದೆ. ವಿದ್ಯಾರ್ಥಿಯ ಕಲಿಕೆಯ ದೃಢೀಕರಣದ ನಂತರ ಇದನ್ನು ದಾಖಲಿಸುತ್ತೇವೆ. ಪುಸ್ತಕ ಖಜಾನೆಯನ್ನು ಮಾಡಿ ಮಕ್ಕಳಿಗೆ ಬ್ಯಾಗ್ ಭಾರವನ್ನು ಇಳಿಸಲಾಗಿದೆ.

**ಕಲಿಕಾ ಚಪ್ಪರ:-** ಸುಸಜ್ಜಿತವಾದ ಕಲಿಕಾ ಚಪ್ಪರವನ್ನು ನಿರ್ಮಿಸಿ ಮಕ್ಕಳಿಂದಲೇ ತಯಾರಿಸಿದ ಮೈಲಿಗಲ್ಲುವಾರು ಚಿತ್ರಗಳು, ಅಂಕಿಗಳು, ಎಲೆಗಳಿಂದ, ಮಣಿಗಳಿಂದ, ಬೇಳೆಕಾಳು, ಟಿಕ್ಲಿ, ಬೀಜಗಳಿಂದ ತಯಾರಿಸಿದ ಮಿಂಚುಪಟ್ಟಿಗಳನ್ನು ತೂಗುಹಾಕಲಾಗಿದೆ. ಇದು ಮಕ್ಕಳ ಕಲಿಕೆಗೆ ಪೂರಕವಾಗಿದೆ.

**ಅಕ್ಷರ ಕಲಿಕಾ ಹಂತಗಳು.(ಮಾದರಿ):-** ಅಕ್ಷರ ಕಲಿಕೆಯ ಹತ್ತು ಹಂತಗಳನ್ನು ಕ್ರಮವಾಗಿ ಗೋಡೆ ಬರಹ ಬರೆಯಲಾಗಿದೆ. ಹಾಗೆಯೇ ಅಕ್ಷರ ವೃಕ್ಷದ ಮಾದರಿಯೊಂದಿಗೆ ಮಕ್ಕಳೇ ಹಂತಗಳಿಗನುಗುಣವಾಗಿ ಅಕ್ಷರಗಳನ್ನು ಗುರುತಿಸುವ ಮೂಲಕ ಸುಲಭ ಕಲಿಕೆಗೆ ಅನುವು ಮಾಡಿಕೊಡಲಾಗಿದೆ.

**ಭಿನ್ನರಾಶಿ ಮತ್ತು ಒತ್ತಕ್ಷರಗಳು:-** ಒತ್ತಕ್ಷರಗಳು ಮತ್ತು ಭಿನ್ನರಾಶಿಯ ಕಲ್ಪನೆಯನ್ನು ಮೂಡಿಸಲು ಗೋಡೆಬರಹ ಮಾಡಲಾಗಿದೆ.

**ಗಣಿತದ ಮಾದರಿಗಳು:-** ಅಂಕಗಳು ಮತ್ತು ಆಕೃತಿಗಳನ್ನು ಮಾದರಿಗಳನ್ನು ಗೋಡೆಗೆ ಅಂಟಿಸಲಾಗಿದೆ. ಏರಿಕೆ-ಇಳಿಕೆಯನ್ನು ಸುಲಭವಾಗಿ ಗುರುತಿಸಲು ಗೋಡೆ ಬರಹ ಮಾಡಲಾಗಿದೆ.

**ವಾಲ್ ಸ್ಲೇಟ್ ಬಳಕೆ:-** ಮಕ್ಕಳು ವಾಲ್ ಸ್ಲೇಟ್ ನಲ್ಲಿ ಬರೆಯಲು ಉತ್ತಮ ವ್ಯವಸ್ಥೆಯನ್ನು ಮಾಡಲಾಯಿತು. ಇದರಿಂದ ಕಲಿಕೆಯಲ್ಲಿ ಸಂಪೂರ್ಣತೆಯನ್ನು ಸಾಧಿಸಲು ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳೇ ಕಾರ್ಡಗಳ ಪದಗಳನ್ನು ಬೇರೆ ವಿದ್ಯಾರ್ಥಿಗೆ ಹೇಳಿ ಬರೆಸುತ್ತಾರೆ. ವಾರಗಳು, ತಿಂಗಳುಗಳು ಮತ್ತು ಅಂಕಿಗಳ ಚಾರ್ಟನ್ನು ಗೋಡೆಗೆ ಅಂಟಿಸಲಾಗಿದೆ.

**ಗಣಿತದ ಮೂಲಕ್ರಿಯೆಗಳ ವೃಕ್ಷ:-** ವೃಕ್ಷದ ಚಿತ್ರದೊಂದಿಗೆ ಗಣಿತದ ಮೂಲಕ್ರಿಯೆಗಳು ಮತ್ತು ಚಿಹ್ನೆಯೊಂದಿಗೆ ಕಲ್ಪನೆ ಮೂಡಿಸುವುದು.

**ವಾಚಕದ ಜೋಡಣೆ:-** ಇಂಗ್ಲೀಷ್ ಅಕ್ಷರಗಳು, ಕನ್ನಡದ ಸ್ವರಾಕ್ಷರಗಳು, ಗುಣಿತಾಕ್ಷರಗಳು ಗಣಿತದ ಚಿಹ್ನೆಗಳನ್ನು ಗೋಡೆಯ ಮೇಲೆ ಬರೆಯಲಾಗಿದ್ದು ಕಲಿಕೆಗೆ ಪುರಕವಾಗಿದೆ. ವಾಚಕಗಳನ್ನು ಮಕ್ಕಳ ಕೈಗೆಟಕುವಂತೆ ಜೋಡಿಸಲಾಗಿದೆ.

**ಟ್ಯಾನ್ ಗ್ರಾಮ್ ರಚನೆ, ಮುಖವಾಡಗಳು, ಪೊಪೆಟ್ ಶೋ :-** ಪೋಪೆಟ್ ಶೋ ನಡೆಸಲು ವ್ಯವಸ್ಥಿತವಾದ ಸಲಕರಣೆಗಳನ್ನು ಜೋಡಿಸಿಕೊಳ್ಳಲಾಗಿದೆ. ಮಕ್ಕಳಿಂದಲೇ ಈ ಕಾರ್ಯಕ್ರಮವನ್ನು ಮಾಡಿಸಲಾಗುತ್ತದೆ. ಮಕ್ಕಳು ಆಸಕ್ತಯಿಂದ ಭಾಗವಹಿಸುವುದಲ್ಲದೆ ಕಲಿಕೆಯು ಸಂತಸದಾಯಕವಾಗಿರುತ್ತದೆ.

**ಪರಿಸರ ಅಧ್ಯಯನದ ಯೋಜನೆಗಳು:-** ಮಾದರಿ ಗ್ರಾಮ, ಪ್ರಾಣಿಸಂಗ್ರಹಾಲಯ, ಸಾರಿಗೆ ವ್ಯವಸ್ಥೆಯ ಯೋಜನೆಗಳ ಮಾದರಿಯನ್ನು ವಿದ್ಯಾರ್ಥಿಗಳಿಂದಲೇ ಮಾಡಿಸಲಾಗಿದೆ. ಇದರಲ್ಲಿ ವಿದ್ಯಾರ್ಥಿಗಳು ಖುಷಿಯಿಂದ ಪಾಲ್ಗೊಳ್ಳುತ್ತಾರೆ. ಈ ಯೋಜನೆಗಳ ಮೂಲಕ ಕಲಿಕೆಯು ದೀರ್ಘಕಾಲ ನೆನಪಿನಲ್ಲಿ ಉಳಿಯುತ್ತದೆ.

**ಮಾದರಿಗಳೊಂದಿಗೆ ಇಂಗ್ಲೀಷ್ ಅಕ್ಷರಗಳ ಕಲಿಕೆ:-** ಮಾದರಿಗಳೊಂದಿಗೆ ಇಂಗ್ಲೀಷಿನ ದೊಡ್ಡ ಅಕ್ಷರಗಳೊಂದಿಗೆ ಚಿಕ್ಕ ಅಕ್ಷರಗಳ ಜೋಡಣೆ ಮಾಡುವುದು. ಪ್ರಾಣಿ ಮತ್ತು ಪಕ್ಷಿಗಳ ಹೆಸರುಗಳನ್ನು ಚಿತ್ರದೊಂದಿಗೆ ಗುರುತಿಸುವುದು.

**ಇಂಗ್ಲೀಷ್ ಸರಳ ಪದಗಳ ರಚನೆ [ಮಾದರಿ] :-** ಮಾದರಿಗಳೊಂದಿಗೆ ಸರಳ ಇಂಗ್ಲೀಷ್ ಪದಗಳ ರಚನೆ ಮಾಡುವುದು. ಮಕ್ಕಳು ಆಸಕ್ತಿದಾಯಕವಾಗಿ ಪಾಲ್ಗೊಳ್ಳುತ್ತಾರೆ.












ನಲಿ-ಕಲಿ
ಒತ್ತಕ್ಷರಗಳು






1
2
3
4
5




CAPITAL LETTERS AND SMALL LETTERS


An
s
t






ಮಾದರಿ ಗ್ರಾಮ


ಅಕ್ಷರ ಕಲಿಕೆಯ ಹಂತಗಳು










